CW : 1
PW : 1

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## CC No.550/2024

| | | |
|---|---|---|
| ಸಾಕ್ಷಿದಾರರ ಹೆಸರು | : | ವಿಷ್ಣು ಪ್ರಸಾದ್ |
| ತಂದೆಯ ಹೆಸರು | : | ವೆಂಕಟರಮಣ ಶಬರಾಯ |
| ಪ್ರಾಯ | : | 45 |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಕೊಕ್ಕಡ, ಪುತ್ತೂರು |
| ದಿನಾಂಕಃ 10.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |
| | | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ಚಾಸಾ2 ಮತ್ತು 3 ನನ್ನ ಪಾರ್ಟ್ನರ್ ಗಳು. ಚಾಸಾ-4 ಮತ್ತು 5 ರವರು ನನ್ನ ಸಿಬ್ಬಂದಿಗಳು. SLV enterprises ಕೆಮ್ಮಾಯಿಯಲ್ಲಿ ಇದ್ದು, ನಾವು FMCG ಡಿಸ್ಟ್ರಿಬ್ಯೂಟರ್ಸ್ ಗಳಾಗಿದ್ದು, 4 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು, ಅಲ್ಲಿ 18 ಜನ ಕೆಲಸ ಮಾಡುತ್ತಾರೆ. ನಾವು ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ ಮಳಿಗೆ ತೆರೆದಿರುತ್ತೇವೆ. ಬೀಗ ಹಾಕಿದಾಗ ಅದರ ಕೀಯನ್ನು ಟಾಯ್ಲೆಟ್ ನಲ್ಲಿ ಇಡುತ್ತೇವೆ.

ದಿಃ23.08.2023 ರಂದು ನಾವು ಎಂದಿನಂತೆ 6 ಗಂಟೆಗೆ ಮಳಿಗೆ ಬೀಗ ಹಾಕಿ ಕೀಯನ್ನು ಟಾಯ್ಲೆಟ್ ನ ಪಕ್ಕ ಇಟ್ಟು ಹೋಗಿದ್ದು, ಮರುದಿನ ಬಂದು ನೋಡಿದಾಗ ಕೀಯಿಂದ ಬಾಗಿಲನ್ನು ತೆರೆಯಲಾಗಿದ್ದು, ಒಳಗೆ ಇದ್ದ DVR , Lenovo Laptop ಮತ್ತು 2000 ಹಣವನ್ನು ಕಳ್ಳತನ

ಮಾಡಲಾಗಿತ್ತು. ಅದೇ ದಿನ ಪೋಲೀಸರಿಗೆ ಮಾಹಿತಿ ನೀಡಿದ್ದೆ, ದೂರು ನೀಡಿರಲಿಲ್ಲ. 2 ದಿನಗಳ ನಂತರ ಲ್ಯಾಪ್ ಟಾಪ್ ಕಳ್ಳತನವಾದ ವಿಚಾರ ಗೊತ್ತಾಯಿತು. ದಿಃ02.09.2023 ರಂದು ದೂರನ್ನು ನೀಡಿರುತ್ತೇವೆ. ಒಟ್ಟು 25,000/- ಮೌಲ್ಯದ ಲ್ಯಾಪ್ ಟಾಪ್, ಒಟ್ಟು 18,000/- ಮೌಲ್ಯದ DVR, 2,000/- ರೂ ಹಣ ಕಳ್ಳತನವಾಗಿರುತ್ತದೆ. ಸದರಿ ದೂರನ್ನು **ನಿಪಿ1** ಎಂದು ಸಾಕ್ಷಿಯ ಸಹಿಯನ್ನು **ನಿಪಿ1(ಎ)** ಎಂದು ಗುರುತಿಸಲಾಯಿತು.

ದೂರು ನೀಡಿದ 2 ದಿನದ ನಂತರ ಪೋಲೀಸರು ಸ್ಥಳಕ್ಕೆ ಬಂದು ಮಹಜರು ಮಾಡಿದ್ದು, ನಾನು ಸ್ಥಳವನ್ನು ತೋರಿಸಿದ ಮೇರೆಗೆ ಸಾಕ್ಷಿದಾರರ ಸಮಕ್ಷಮ ಮಹಜರನ್ನು ಸಂಜೆ 4.00 ರಿಂದ 6.00 ಗಂಟೆಯವರೆಗೆ ಮಾಡಿರುತ್ತಾರೆ. ಸದರಿ ಮಹಜರನ್ನು **ನಿಪಿ2** ಎಂದು ಸಾಕ್ಷಿಯ ಸಹಿಯನ್ನು **ನಿಪಿ2(ಎ)** ಎಂದು ಗುರುತಿಸಲಾಯಿತು. ಇಬ್ಬರು ಆರೋಪಿತರನ್ನು ದೂರು ನೀಡಿದ 10-15 ದಿನದ ನಂತರ ಪೋಲೀಸರು ಅಂಗಡಿಯ ಬಳಿ ಕರೆದುಕೊಂಡು ಬಂದಿದ್ದು, ಆರೋಪಿಗಳು ಕಳ್ಳತನ ಮಾಡಿದ ವಿಧಾನಗಳನ್ನು ತೋರಿಸಿರುತ್ತಾರೆ. ಠಾಣೆಗೆ ನನ್ನನ್ನು ಕರೆಸಿ ಆರೋಪಿಗಳನ್ನು ತೋರಿಸಿರುವುದಿಲ್ಲ ಮತ್ತು ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ 3ನೇ ಆರೋಪಿಯನ್ನು ಕೂಡಾ ಆ ದಿನ ಪೋಲೀಸರು ಅಂಗಡಿಯ ಬಳಿ ಕರೆದುಕೊಂಡು ಬಂದಿದ್ದರು. 1 ಮತ್ತು 2 ನೇ ಆರೋಪಿತರು ಗೈರು ಹಾಜರಿದ್ದು, ಅವರ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ. ಲ್ಯಾಪ್ ಟಾಪ್ ನ್ನು ನ್ಯಾಯಾಲಯದಿಂದ ಬಿಡುಗಡೆ ಮಾಡಿಸಿಕೊಂಡಿರುತ್ತೇನೆ. ಅದನ್ನು ಛಾಯಾಚಿತ್ರದಲ್ಲಿ ನೋಡಿ ಗುರುತಿಸಿರುತ್ತೇನೆ. ಸದರಿ 5 ಛಾಯಾಚಿತ್ರವನ್ನು ಒಟ್ಟಾಗಿ **ನಿಪಿ-3** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿಯನ್ನು ಸರ್ಕಾರಿ ಸಹಾಯಕ ಅಭಿಯೋಜಕರವರು ಕೋರಿಕೊಂಡಿದ್ದು, ಅನುಮತಿ ನೀಡಿಲಾಯಿತು)**

CW : 1
PW : 1

**ಪಾಟಿಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಅದಿಃ04.09.2023 ರಂದು ನನ್ನನ್ನು ಮತ್ತು ಚಾಸಾ2 ರಿಂದ 5 ರವರನ್ನು ಠಾಣೆಗೆ ಕರೆದು ಅಲ್ಲಿದ್ದ 2 ನೇ ಆರೋಪಿಯನ್ನು ಮತ್ತು ಲ್ಯಾಪ್ ಟಾಪ್ ನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ನನ್ನ ಕಳುವಾದ ಲ್ಯಾಪ್ ಟಾಪ್ ನ್ನು ನೋಡಿ ಗುರುತಿಸಿ ಅದೇ ದಿನ ನನ್ನ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯನ್ನು **ನಿಪಿ4** ಎಂದು ಗುರುತಿಸಲಾಯಿತು.

ದಿಃ16.11.2023 ರಂದು ಪುತ್ತೂರು ನಗರ ಠಾಣೆಗೆ ನನ್ನನ್ನು, ಚಾಸಾ2 ರಿಂದ 5 ರವರನ್ನು ಅಲ್ಲಿ 1ನೇ ಆರೋಪಿಯನ್ನು ತೋರಿಸಿಕೊಟ್ಟು, ಕಳುವಾದ DVR ನ್ನು ಬೆದ್ರಾಳ ಎಂಬಲ್ಲಿ ನೀರಿನ ತೋಡಿಗೆ ಎಸೆದಿದ್ದಾರೆ ಎಂದು ಪೋಲೀಸರು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ನನ್ನ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯನ್ನು **ನಿಪಿ5** ಎಂದು ಗುರುತಿಸಲಾಯಿತು.

ದಿಃ22.12.2023 ರಂದು ಪುತ್ತೂರು ನಗರ ಠಾಣೆಗೆ ನನ್ನನ್ನು, ಚಾಸಾ2 ರಿಂದ 5 ರವರನ್ನು ಅಲ್ಲಿ 3ನೇ ಆರೋಪಿಯನ್ನು ತೋರಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ನನ್ನ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯನ್ನು **ನಿಪಿ6** ಎಂದು ಗುರುತಿಸಲಾಯಿತು. ಆರೋಪಿತರನ್ನು ಠಾಣೆಯಲ್ಲಿ ನೋಡಿದ್ದರೂ ಕೂಡಾ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಆರೋಪಿ ಪರ ಶ್ರೀ K.N.S. ವಕೀಲರಿಂದಃ**

SLV enterprises ನ ಪರವಾನಗಿ ಸಂದೀಪ್ ಪ್ರಸಾದ್ ರವರ ಹೆಸರಿನಲ್ಲಿರುತ್ತದೆ. SLV enterprises ನಲ್ಲಿ ನಾನು ಪಾಲುದಾರ ಎಂಬ ಬಗ್ಗೆ ತನಿಖಾಧಿಕಾರಿಗೆ ದಾಖಲಾತಿಯನ್ನು ನೀಡಿರುವುದಿಲ್ಲ. 18 ಜನ ಕೆಲಸಗಾರರಲ್ಲಿ 6 ಜನ ಹೆಂಗಸರು, ಉಳಿದವರು ಗಂಡಸರಾಗಿರುತ್ತಾರೆ. SLV enterprises

CW : 1
PW : 1

ನಲ್ಲಿ ಒಟ್ಟು 6 ರೂಮ್ ಗಳಿವೆ. ಪ್ರತ್ಯೇಕ ರೂಮಿಗೆ ಪ್ರತ್ಯೇಕ ಶೆಟರ್ ಗಳಿವೆ ಎಂದರೆ ಸರಿ. ಪ್ರತ್ಯೇಕ ಶೆಟರ್ ಗಳಿಗೆ ಪ್ರತ್ಯೇಕ ಬೀಗಗಳಿವೆ ಎಂದರೆ ಸರಿಯಲ್ಲ. ದಿಃ23.08.2023 ರಂದು ಕೊನೆಯಲ್ಲಿ ವ್ಯವಹಾರವನ್ನು ಮುಗಿಸಿ ಹೋದವರು ಯಾರು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ನಮ್ಮ ಸಿಬ್ಬಂದಿಯಾಗಿರುತ್ತಾರೆ. ಹಣ ಬಂದ ಬಗ್ಗೆ ಮತ್ತು ಹೋದ ಬಗ್ಗೆ ಲೆಡ್ಜರ್ ಇರುತ್ತದೆ ಎಂದರೆ ಸರಿ. ದಿಃ23.08.2023 ರಂದು ನಡೆದ ವ್ಯವಹಾರದ ಬಗ್ಗೆ ದಾಖಲಾತಿ ಕಂಪ್ಯೂಟರ್ ನಲ್ಲಿ ಇರುತ್ತದೆ. ಆ ಬಗ್ಗೆ ನಾನು ಪೋಲೀಸರಿಗೆ ಹೇಳಿರುವುದಿಲ್ಲ. ಆದ್ದರಿಂದ ಅಲ್ಲಿ 2,000/- ರೂ. ಇತ್ತು ಎಂದು ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ. ಸಿಸಿ ಕ್ಯಾಮೆರಾವನ್ನು ಮೊಬೈಲ್ ಗೆ ಕನೆಕ್ಟ್ ಮಾಡಿರುತ್ತೇವೆ, ಆದರೆ ಅದರಲ್ಲಿ ಲೈವ್ ಮಾತ್ರ ನೋಡಬಹುದು. ಘಟನೆ ನಡೆಯುವಾಗ ಮೊಬೈಲ್ ನ್ನು ನೋಡಿದ್ದರೆ ಕಾಣಿಸುತ್ತಿತ್ತು. ಸದರಿ ಲ್ಯಾಪ್ ಟಾಪ್ ನನ್ನ ಪರ್ಸನಲ್ ಲ್ಯಾಪ್ ಟಾಪ್ ಆಗಿರುತ್ತದೆ. ನಾನು ಅದನ್ನು ಅಷ್ಟಾಗಿ ಉಪಯೋಗಿಸದೇ ಇದ್ದುದ್ದರಿಂದ ಅದು ಕಳೆದುಹೋದ ಬಗ್ಗೆ ನಮಗೆ ಗೊತ್ತಿರುವುದಿಲ್ಲ. 2 ದಿನಗಳ ನಂತರ ಲ್ಯಾಪ್ ಟಾಪ್ ಸಿಗದೇ ಇದ್ದಾಗ ಕಳ್ಳತನವಾಗಿರುವುದು ಗೊತ್ತಾಗಿರುತ್ತದೆ. 24 ನೇ ತಾರೀಖಿನಂದು ಪೋಲೀಸರಿಗೆ ಘಟನೆಯ ಬಗ್ಗೆ ಮೌಖಿಕವಾಗಿ ತಿಳಿಸಿದ್ದೆವು. ಘಟನೆಯಾದ 9 ದಿನದ ನಂತರ ದೂರನ್ನು ನೀಡಿರುವುದು ಎಂದರೆ ಸರಿ. 2 ದಿನದ ಬಳಿಕ ಲ್ಯಾಪ್ ಟಾಪ್ ಕಳ್ಳತನವಾದ ವಿಚಾರ ತಿಳಿದರೂ ನಮ್ಮ ಪಾರ್ಟ್ನರ್ ಗಳು ಹೊರಗೆ ಇದ್ದುದ್ದರಿಂದ ಅವರು ಬರುವವರೆಗೆ ಕಾದು ನಂತರ ದೂರು ನೀಡಿರುತ್ತೇನೆ. ಪೋಲೀಸರು ಛಾಯಾಚಿತ್ರ ತೆಗೆದಿರುತ್ತಾರೆ. ದೂರನ್ನು ನಾನು ಹೇಳಿದಂತೆ ಪೋಲೀಸರು ಬರೆದಿರುತ್ತಾರೆ. ದೂರಿನಲ್ಲಿ ಏನೆಲ್ಲ ಬರೆದಿದೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಕೀ ಇಡುವ ವಿಚಾರ ನಮ್ಮ ಸಿಬ್ಬಂದಿಗಳಿಗೆಲ್ಲರಿಗೂ ಗೊತ್ತು. ಮಹಜರು ಮಾಡಿದ ದಿನಾಂಕ ನಿಖರವಾಗಿ ಗೊತ್ತಿರುವುದಿಲ್ಲ. ಆ ಸಮಯದಲ್ಲಿ ಸ್ಥಳದಲ್ಲಿ ನನ್ನ ಪಾರ್ಟ್ನರ್ ಗಳು ಮತ್ತು ಸಿಬ್ಬಂದಿಗಳು ಇದ್ದರು. ಅವರಿಗೆ ಪೋಲೀಸರು ಯಾವುದೇ ನೋಟೀಸು ನೀಡಿರುವುದಿಲ್ಲ. ಮಹಜರನ್ನು ಯಾರು ಬರೆದಿರುತ್ತಾರೆ ಎಂದು ನಿಖರವಾಗಿ

CW : 1
PW : 1

ಹೇಳಲಾಗುವುದಿಲ್ಲ. ಮಹಜರಿನಲ್ಲಿ ಏನೆಲ್ಲ ಬರೆದಿದೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಸಿಬ್ಬಂದಿಗಳಾದ ದಿವಾಕರ್ ಮತ್ತು ಸಂಟ್ಯಾರ್ ಜಲೀಲ್ ಸಹಿ ಮಾಡಿದ್ದಾರೆ. ನಮ್ಮ ಕಚೇರಿಗೆ ಆರೋಪಿತರನ್ನು ಕರೆದುಕೊಂಡು ಬಂದಾಗ 3 ಜನ ಪೋಲೀಸರು ಬಂದಿದ್ದರು. ಸದರಿ ಆರೋಪಿತರಲ್ಲಿ ಒಬ್ಬರು ಆರೋಪಿತರು ನ್ಯಾಯಾಲಯದಲ್ಲಿದ್ದು, ಇನ್ನೊಬ್ಬರನ್ನು ಗುರುತಿಸಬಹುದು, ಇನ್ನೊಬ್ಬರು ಗೊತ್ತಿಲ್ಲ. ಪಿರ್ಯಾದಿ ಮತ್ತು ಮಹಜರಿಗೆ ಬಿಟ್ಟು ನನ್ನ ಸಹಿಯನ್ನು ಬೇರೆ ಯಾವ ದಾಖಲೆಗೂ ಪಡೆದಿರುವುದಿಲ್ಲ. ದಿಃ23.08.2023 ರಂದು ಆರೋಪಿತರು ನಮ್ಮ ಕಚೇರಿಯಲ್ಲಿ ಯಾವುದೇ ಕಳ್ಳತನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಲ್ಯಾಪ್ ಟಾಪ್ ನ ಬಿಲ್ಲು ಛಾಯಾಚಿತ್ರದಲ್ಲಿ ಕಂಡುಬರುವುದಿಲ್ಲ ಎಂದರೆ ಸರಿ. ನಾನು ಹೇಳಿದ ಲ್ಯಾಪ್ ಟಾಪ್ ನಂತೆ ಇರುವ ಲ್ಯಾಪ್ ಟಾಪ್ ಗಳು ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಸರಿ. ನಮ್ಮ ಸಿಬ್ಬಂದಿಗಳು ಮಾಡಿದ ತಪ್ಪಿಗೆ ಆರೋಪಿತರ ಮೇಲೆ ಸುಳ್ಳು ಪಿರ್ಯಾದಿ ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಮು.ಮಾ. ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು